ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
KARNATAK UNIVERSITY, DHARWAD
ಸಿಬ್ಬಂದಿ ಹಾಗೂ ಆಡಳಿತ ಸುಧಾರಣಾ ವಿಭಾಗ
DPAR

'A' Grade
NAAC Accredited 2008

ಪಾವಟೆನಗರ, ಧಾರವಾಡ.
Pavate Nagar, Dharwad.
Tel Ph. No.0836-2215349
Website : www.kud.ac.in

ನಂ.ಕವಿವಿ/ಸಿಆಸುವಿ/ಶಿಕ್ಷಕೇತರ/10/2022/1628 ದಿನಾಂಕ : 20 SEP 2022

# ಸುತ್ತೋಲೆ

**ವಿಷಯ** : ಕ.ವಿ.ವಿ ವೃಂದ ಮತ್ತು ನೇಮಕಾತಿ ಅನುಶಾಸನಕ್ಕೆ ತಿದ್ದುಪಡಿ ತರುವ ಬಗ್ಗೆ

**ಉಲ್ಲೇಖ** : 1) ಸರ್ಕಾರದ ಸುತ್ತೋಲೆ ನಂ.ಸಿಆಸು 17 ಸೇನಿಡಿ 2020 ದಿನಾಂಕ.06.07.2020
2) ಸಮಿತಿಯು ಸಲ್ಲಿಸಿದ ವರದಿ ದಿನಾಂಕ.18.09.2022
3) ಮಾನ್ಯ ಕುಲಪತಿಗಳ ಆದೇಶ ದಿನಾಂಕ.20.09.2022

* * *

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಗಳಿಗೆ ಸಂಬಂಧಿಸಿದಂತೆ, ಸಧ್ಯ ಕರ್ನಾಟಕ ವಿಶ್ವವಿದ್ಯಾಲಯದ ಚಾಲ್ತಿಯಲ್ಲಿರುವ ಕವಿವಿ ಸಿಬ್ಬಂದಿ ವೃಂದ ಮತ್ತು ನೇಮಕಾತಿ ಅನುಶಾಸನ 1988 ರ ಅನುಶಾಸನಕ್ಕೆ ತಿದ್ದುಪಡಿ ತರುವ ಹಿನ್ನಲೆಯಲ್ಲಿ ಪ್ರಸಕ್ತ ಕಾರ್ಯನಿರ್ವಹಿಸುತ್ತಿರುವ ಮಾನ್ಯ ಸಿಂಡಿಕೇಟ ಸದಸ್ಯರು ಇವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿತ್ತು. ಸದರಿ ಸಮಿತಿಯು ಹಲವಾರು ಭಾರಿ ಸಭೆಯನ್ನು ಸೇರಿ ಈಗ ಸರ್ಕಾರದಲ್ಲಿ/ ಇತರೆ ವಿಶ್ವವಿದ್ಯಾಲಯಗಳಲ್ಲಿ ಇರುವಂತೆ ಕೆಲವೊಂದು ಹುದ್ದೆಗಳ ಪದನಾಮ ಬದಲಾವಣೆ ಮತ್ತು ಶೈಕ್ಷಣಿಕ ಹಾಗೂ ಇತರೇ ಅರ್ಹತಾ ನಿಯಮಗಳನ್ನು ಅಗತ್ಯತೆ ಹಾಗೂ ಅವಶ್ಯಕತೆಗೆ ತಕ್ಕಂತೆ ಸಂಬಂಧಿಸಿದ ವಿಭಾಗಗಳಿಂದ ಮಾಹಿತಿ ಪಡೆದು ಈಗಿನ ವಿದ್ಯಮಾನ ಹಾಗೂ ತಂತ್ರಜ್ಞಾನಕ್ಕೆ ತಕ್ಕಂತೆ ನೇಮಕಾತಿ ಹಾಗೂ ಪದೋನ್ನತಿ ನಿಯಮಗಳಿಗೆ ತಿದ್ದುಪಡಿ ತರಬಹುದಾದ ರೀತಿಯಲ್ಲಿ ನಿಯಮಗಳ ಅಡಿಯಲ್ಲಿ ತಿದ್ದುಪಡಿ ಮಾಡಿ ತನ್ನ ಕರಡು ಅನುಶಾಸನದ ವರದಿಯನ್ನು ತಯಾರಿಸಿ ದಿನಾಂಕ.17.09.2022 ರಂದು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುತ್ತದೆ.

ಆದ್ದರಿಂದ, ಸಮಿತಿ ತಿದ್ದುಪಡಿ ಸೂಚಿಸಿದ ಕರಡು ಅನುಶಾಸನವನ್ನು ವಿಶ್ವವಿದ್ಯಾಲಯದ ಅಂತರ್ಜಾಲ www.kud.ac.in ರ Notification ಅಂಕಣದಲ್ಲಿ ಪ್ರಕಟಪಡಿಸಲಾಗಿದ್ದು, ಸದರಿ ಕರಡು ಅನುಶಾಸನಕ್ಕೆ ಸಲಹೆ ಸೂಚನೆಗಳು, ಅಭಿಪ್ರಾಯಗಳೆನ್ನಾದರೂ ಇದ್ದಲ್ಲಿ ಈ ಸುತ್ತೋಲೆ ಹೊರಡಿಸಿದ 10 ದಿನಗಳೊಳಗಾಗಿ ಅಂದರೆ ದಿನಾಂಕ: 30.09.2022 ರ ಒಳಗಾಗಿ ಲಿಖಿತವಾಗಿ ಪೂರಕ ಮತ್ತು ಅಧಿಕೃತ ದಾಖಲೆಗಳೊಂದಿಗೆ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ತಿಳಿಸಲಾಗಿದೆ. ನಂತರ ಬರುವ ಸಲಹೆ ಸೂಚನೆ/ ಅಭಿಪ್ರಾಯ/ ಆಕ್ಷೇಪಣೆಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ.

ಮುಂದುವರೆದು, ಎಲ್ಲ ವಿಭಾಗಗಳ ಮೇಲಾಧಿಕಾರಿಗಳು ಈ ಸುತ್ತೋಲೆಯ ಅಂಶಗಳನ್ನು ತಮ್ಮ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರತಿಯೊಬ್ಬ ಖಾಯಂ ಸಿಬ್ಬಂದಿಯ ಗಮನಕ್ಕೆ ಕಡ್ಡಾಯವಾಗಿ ತರಲು ಸೂಚಿಸುತ್ತಾ, ಸದರಿ ಸುತ್ತೋಲೆಗೆ ಎಲ್ಲ ಸಿಬ್ಬಂದಿಗಳ ಸಹಿ ಪಡೆದು ವಿಭಾಗದಲ್ಲಿ ಇಟ್ಟುಕೊಳ್ಳುವುದು ಮತ್ತು ಕೋರಿದಾಗ ಈ ಕಚೇರಿ ಸಲ್ಲಿಸುವುದು.

20/9/22

ಕುಲಸಚಿವರು

ಗೆ,

1. ಕುಲಸಚಿವರು (ಮೌಲ್ಯಮಾಪನ), ಕ.ವಿ.ವಿ, ಧಾರವಾಡ.
2. ಹಣಕಾಸು ಅಧಿಕಾರಿಗಳು, ಕ.ವಿ.ವಿ., ಧಾರವಾಡ.
3. ಗ್ರಂಥಪಾಲರು, ಪ್ರೊ. ಶಿ. ಶಿ. ಬಸವನಾಳ ಗ್ರಂಥಾಲಯ, ಕ.ವಿ.ವಿ, ಧಾರವಾಡ.
4. ಎಲ್ಲ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಅಧ್ಯಕ್ಷರು ಹಾಗೂ ಆಡಳಿತ ವಿಭಾಗಗಳ ಮುಖ್ಯಸ್ಥರುಗಳು, ಕ.ವಿ.ವಿ. ಧಾರವಾಡ.
5. ಎಲ್ಲ ಸ್ನಾತಕೋತ್ತರ ಕೇಂದ್ರಗಳ ಆಡಳಿತಾಧಿಕಾರಿಗಳು, ಗದಗ, ಹಾವೇರಿ ಹಾಗೂ ಕಾರವಾರ.
6. ಎಲ್ಲ ಪೀಠಗಳ ಸಂಯೋಜಕರು, ಕವಿವಿ ಧಾರವಾಡ.
7. ಎಲ್ಲ ಪ್ರಾಚಾರ್ಯರು, ಕ.ವಿ.ವಿ, ಅಧೀನ ಮಹಾವಿದ್ಯಾಲಯಗಳು, ಧಾರವಾಡ.
8. ಉಪಕುಲಸಚಿವರು, ಸಿಆಸುವಿ/ ವಿದ್ಯಾಮಂಡಳ/ ಪರೀಕ್ಷಾ/ಪ.ಜಾತಿ-ಪ.ಪಂಗಡ ಘಟಕ/ ಹಣಕಾಸು/ ದೂರ ಸಂಪರ್ಕ ಶಿಕ್ಷಣ ವಿದ್ಯಾಲಯ ಕವಿವಿ ಧಾರವಾಡ.

ಪು.ತಿ.ನೋ. . .

20 SEP 2022



9. ಸ್ಥಾನಿಕ ಅಭಿಯಂತರರು, ಕ.ವಿ.ವಿ, ಧಾರವಾಡ.
10. ಎಲ್ಲ ವಸತಿ ನಿಲಯಗಳ ನಿಲಯಪಾಲಕರು, ಕ.ವಿ.ವಿ, ಧಾರವಾಡ.
11. ಪ್ರಾಚಾರ್ಯರು, ಕ.ವಿ.ವಿ, ಪಿ.ಯು. ಕಾಲೇಜು ಹಾಗೂ ಮಾಧ್ಯಮಿಕ ಶಾಲೆ ಧಾರವಾಡ.
12. ಮುಖ್ಯೋಪಾಧ್ಯಾಯರು, ಕ.ವಿ.ವಿ, ಪ್ರಾಥಮಿಕ ಶಾಲೆ ಕ.ವಿ.ವಿ, ಆವರಣ ಧಾರವಾಡ.
13. ಅಧ್ಯಕ್ಷರು, ಸ್ನಾತಕೋತ್ತರ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗ, ಕ.ವಿ.ವಿ., ಧಾರವಾಡ.
14. ಆರೋಗ್ಯಾಧಿಕಾರಿಗಳು, ಕವಿವಿ/ ಕೆಸಿಡಿ ಆರೋಗ್ಯ ಕೇಂದ್ರ, ಧಾರವಾಡ.
15. ನಿರ್ದೇಶಕರು, ಐ.ಟಿ. ವಿಭಾಗ, ಕ.ವಿ.ವಿ. ಧಾರವಾಡ ಇವರಿಗೆ ಮಾಹಿತಿ ಹಾಗೂ ಸದರಿ ಸುತ್ತೋಲೆ ಮತ್ತು ಪಿ.ಡಿ.ಎಫ್. ನಮೂನೆಯಲ್ಲಿ ತಮಗೆ ನೀಡಲಾಗುವ ದಾಖಲೆಯನ್ನು ವಿಶ್ವವಿದ್ಯಾಲಯದ ಅಂತರ್ಜಾಲದ Notification ಅಂಕಣದಲ್ಲಿ ಪ್ರಚುರಪಡಿಸಲು ಈ ಮೂಲಕ ತಿಳಿಸಲಾಗಿದೆ.

**<u>ಪ್ರತಿ ಮಾಹಿತಿಗಾಗಿ:</u>**

1. ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ಕುಲಪತಿಗಳ ಕಾರ್ಯಾಲಯ, ಕ.ವಿ.ವಿ, ಧಾರವಾಡ.
2. ಕುಲಸಚಿವರ ಆಪ್ತ ಸಹಾಯಕರು, ಕುಲಸಚಿವರ ಕಾರ್ಯಾಲಯ, ಕ.ವಿ.ವಿ, ಧಾರವಾಡ.
3. ಕುಲಸಚಿವರು (ಮೌಲ್ಯಮಾಪನ) ಇವರ ಆಪ್ತ ಸಹಾಯಕರು, ಕ.ವಿ.ವಿ. ಧಾರವಾಡ.
4. ಹಣಕಾಸು ಅಧಿಕಾರಿಗಳ ಆಪ್ತ ಸಹಾಯಕರು, ಕ.ವಿ.ವಿ., ಧಾರವಾಡ.